ಆ) ಯೋಜನೆಗಳಿಗೆ ಸರ್ಕಾರ ನಿಗಿದಗೊಳಿಸಿರುವ ಮೊಬಲಗಳೆಷ್ಟು;

ಇ) ಈ ಮೊಬಲಗು ಎಲ್ಲಾ ಯೋಜನೆಗಳಿಗೆ ಸಾಕಾಗುವುದೇ;

ಈ) ಹಾಗಿದ್ದಲ್ಲಿ, ಸರ್ಕಾರ ಅಗತ್ಯ ಅನುದಾನಗಳನ್ನು ಒದಗಿಸುವುದೇ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಕೃಷಿ ಇಲಾಖೆಯು ಅನುಷ್ಟಾನಗೊಳಿಸುತ್ತಿರುವ ಯೋಜನೆಗಳಾವುವೆಂದರೆ, ಬೀಜ, ರಸಗೊಬ್ಬರ, ಕೀಟನಾಶಕ, ಕೃಷಿ ಯಾಂತ್ರೀಕರಣ, ತರಬೇತಿ ಮತ್ತು ವಿಸ್ತರಣೆ, ಸಾವಯವ ಕೃಷಿ, ಹನಿ ಮತ್ತು ತುಂತುರು ನೀರಾವರಿ ಬೇಳೆಕಾಳು, ಎಣ್ಣೆಕಾಳು, ಮುಸುಕಿನ ಜೋಳ, ಹತ್ತಿ ಬೆಳೆಗಳ ಉತ್ತಾದನಾ ಯೋಜನೆ, ಬೆಳೆ ವಿಮೆ ಇವೇ ಮೊದಲಾದ ಕೃಷಿ ವಿಷಯಗಳನ್ನೊಳಗೊಂಡಿರುತ್ತದೆ.

ಆ) ಈ ಯೋಜನೆಗಳ ಅನುಷ್ಟಾನಕ್ಕಾಗಿ 2004–05ನೇ ಸಾಲಿನಲ್ಲಿ ಒಟ್ಟು 32248.99 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿರುತ್ತದೆ.

ಇ) ಹೌದು.

ಈ) ಉದ್ಭವಿಸುವುದಿಲ್ಲ.

651(1256) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುವ ಲಾಲ್‌ಬಾಗ್‌ನಲ್ಲಿರುವ ಗಾಜಿನ ಮನೆ ಆಧುನೀಕರಣಕ್ಕೆ ಎಷ್ಟು ವೆಚ್ಚವಾಗಿರುತ್ತದೆ; ವಿವರಗಳನ್ನು ಒದಗಿಸುವುದು;

ಆ) ಈ ಆಧುನೀಕರಣ ಕಾಮಗಾರಿಗಳನ್ನು ತೋಟಗಾರಿಕೆ ಇಲಾಖೆಯಿಂದ ಮಾಡಿಸದಿರಲು ಕಾರಣಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಗಾಜಿನ ಮನೆ ಆಧುನೀಕರಣಕ್ಕೆ ತಗುಲಿದ ವೆಚ್ಚ ರೂ. 2,57,11,767–00 (ಎರಡು ಕೋಟಿ ಐವತ್ತೇಳು ಲಕ್ಷದ ಹನ್ನೊಂದು ಸಾವಿರದ ಏಳು ನೂರ ಅರವತ್ತೇಳು ರೂಪಾಯಿಗಳು).

ಆ) ಸರ್ಕಾರದ ಆದೇಶ ಸಂಖ್ಯೆ: ನಅಇ/190/ಬೆಂಆಸೇ/2003, ಬೆಂಗಳೂರು, ದಿನಾಂಕ 19–6–2003ರಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಭೌತಿಕವಾಗಿ ಹಾಗೂ ಸ್ಥಾನಿಕವಾಗಿ ಈ ಆಧುನೀಕರಣ ಹಾಗೂ ಲಾಲ್‌ಬಾಗ್‌ನ ಅಭಿವೃದ್ಧಿ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ. ಲಾಲ್‌ಬಾಗ್‌ನಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ತೋಟಗಾರಿಕೆ ಇಲಾಖೆಯೇ ನಿರ್ವಹಿಸುತ್ತಿದೆ.